ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ
D. DEVARAJ URS BACKWARD CLASSES DEVELOPMENT CORPORATION
(ಕರ್ನಾಟಕ ಸರ್ಕಾರದ ಉದ್ಯಮ) (A Government of Karnataka Undertaking)

ಕ್ರಮಾಂಕ/No.: ದೇಹಿನಿ/ಸ/ನಿಯೋಮೌ/ಸಿಆರ್-30/2015-16 ದಿನಾಂಕ/Dated : 25/04/2019

ಸರ್ಕಾರದ ಕಾರ್ಯದರ್ಶಿಗಳು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಮಾನ್ಯರೆ,

ವಿಷಯ : ಕೆ.ಡಿ.ಪಿ. ಸಭೆಯಲ್ಲಿ ಚರ್ಚಿಸಿದಂತೆ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ವತಿಯಿಂದ ನಡೆಸಿದ ಅಧ್ಯಯನಗಳ ಮುಖ್ಯಾಂಶಗಳ ಮೇಲೆ ನಿಗಮದಿಂದ ತೆಗೆದುಕೊಂಡ ಕ್ರಮಗಳ ಬಗ್ಗೆ.

ಉಲ್ಲೇಖ : ಸರ್ಕಾರದ ಪತ್ರ ಸಂಖ್ಯೆ: ಹಿಂವಕ 03 ಸಮನ್ವಯ 2019, ದಿನಾಂಕ:16/04/2019.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದ ಪತ್ರದಲ್ಲಿ ಯೋಜನಾ ಇಲಾಖೆಯ ಮೌಲ್ಯಮಾಪನ ವರದಿ ಮತ್ತು ಶಿಫಾರಸ್ಸುಗಳ ಮೇಲೆ 2014-15ನೇ ಸಾಲಿನಿಂದ ತೆಗೆದುಕೊಂಡ ಕ್ರಮಗಳ ಬಗ್ಗೆ ವರದಿಯನ್ನು ತಯಾರಿಸಿ ಕಳುಹಿಸಿಕೊಡುವಂತೆ ತಿಳಿಸಲಾಗಿರುತ್ತದೆ.

ನಿಗಮದಲ್ಲಿ ಅನುಷ್ಠಾನಗೊಳಿಸುತ್ತಿರುವ ಶ್ರಮಶಕ್ತಿ/ಸಾಂಪ್ರದಾಯಿಕ ವೃತ್ತಿದಾರರ ಸಾಲ ಯೋಜನೆ, ಮೈಕ್ರೋ ಕ್ರೆಡಿಟ್ ಯೋಜನೆ, ಅಲೆಮಾರಿ/ಅರೆ ಅಲೆಮಾರಿ ಜನಾಂಗದವರಿಗೆ ಸ್ವಯಂ ಉದ್ಯೋಗ ಸಾಲ ಯೋಜನೆ ಮತ್ತು ಗಂಗಾ ಕಲ್ಯಾಣ ನೀರಾವರಿ ಯೋಜನೆಗಳ ಮೌಲ್ಯಮಾಪನ ಕಾರ್ಯ ಮಾಡಿಸಲಾಗಿದೆ. ಶ್ರಮಶಕ್ತಿ/ಸಾಂಪ್ರದಾಯಿಕ ವೃತ್ತಿದಾರರ ಸಾಲ ಯೋಜನೆಯ ಮೌಲ್ಯೀಕರಣದ ಅಂತಿಮ ವರದಿ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದಲ್ಲಿ ಪರಿಶೀಲನೆಯಲ್ಲಿದೆ. ಉಳಿದ 3 ಯೋಜನೆಗಳ ಮೌಲ್ಯಮಾಪನದ ವರದಿಯ ಶಿಫಾರಸ್ಸುಗಳ ಮೇಲೆ ವಹಿಸಿರುವ ಕ್ರಮದ ಮಾಹಿತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಮಾನ್ಯರ ಅವಗಾಹನೆಗೆ ಸಲ್ಲಿಸಿದೆ.

ತಮ್ಮ ವಿಶ್ವಾಸಿ,

ವ್ಯವಸ್ಥಾಪಕ ನಿರ್ದೇಶಕರು.

ನಂ. 16-ಡಿ, 4ನೇ ಮಹಡಿ, ದೇವರಾಜ ಅರಸು ಭವನ, ಮಿಲ್ಲರ್ಸ್ ಟ್ಯಾಂಕ್ ಬಂಡ್ ಏರಿಯಾ, ವಸಂತನಗರ, ಬೆಂಗಳೂರು-52. # 16-D, 4th Floor, Devaraj Urs Bhavan, Millers Tank Bund Area, Vasanthanagar, Bangalore-52.
Ph.: 080-22374832, 22374834 Fax: 080-22374833, E-mail: md.dbcdc@gmail.com, Visit at: www.karnataka.gov.in/dbcdc

IV)

1. **Tide of the Project** : Evaluation of the Ganga Kalyana Scheme from 2008-09 to 2012-13
2. **Department** : D.Devaraj Urs Backward Classes Development Corporation Limited.
3. **Consultant Organization:** Hyderabad Karnataka Centre for Advanced Learning- Gulbarga.

| Sl. No. | Recommendation | Action Taken Report | |
|---|---|---|---|
| | **Recommendation for implementation by Corporation:** | | |
| 1 | There is need to strengthen the monitoring mechanism at district level by recruiting minimum required staff, that will help in timely scrutiny of applications and monitoring of the installation of systems. | ಕೆ.ಪಿ.ಎಸ್.ಸಿ. ಮೂಲಕ ಆಯ್ಕೆಗೊಂಡ ನಿಗಮಕ್ಕೆ ನೇಮಕಗೊಂಡ ಸಹಾಯಕ ಅಭಿವೃದ್ಧಿ ಅಧಿಕಾರಿಗಳನ್ನು ಜಿಲ್ಲೆಗಳಿಗೆ ನಿಯೋಜನೆ ಮಾಡಲಾಗಿದ್ದು, ಇವರಿಗೆ ಜಿಲ್ಲಾ ವ್ಯವಸ್ಥಾಪಕರೊಂದಿಗೆ ಗಂಗಾ ಕಲ್ಯಾಣ ಯೋಜನೆಯ ಎಲ್ಲಾ ಹಂತದ ಅನುಷ್ಠಾನದ ಜವಾಬ್ದಾರಿ ನೀಡಲಾಗಿರುತ್ತದೆ. ಇನ್ನೂ ಖಾಲಿ ಇರುವ 'ಸಿ' ವೃಂದದ ಹುದ್ದೆಗಳನ್ನು ಕೆ.ಪಿ.ಎಸ್.ಸಿ. ಮುಖಾಂತರ ಭರ್ತಿ ಮಾಡಿಕೊಳ್ಳಲು ದಿನಾಂಕ:23/0[illegible]/2017ರಂದು ಪತ್ರ ಬರೆಯಲಾಗಿದೆ. | -- |
| 2 | It is essential to increase transparency in the implementation of the scheme, particularly in the selection of beneficiaries. | ಗಂಗಾ ಕಲ್ಯಾಣ ಯೋಜನೆ ಸೌಲಭ್ಯ ಕೋರಿ ವಿಧಾನ ಸಭಾ ಕ್ಷೇತ್ರವಾರು ಸ್ವೀಕೃತಗೊಂಡ ಅರ್ಜಿಗಳ ಫಲಾನುಭವಿಗಳ ಪೂರ್ಣ ವಿವರಗಳನ್ನು ಮಾನ್ಯ ಶಾಸಕರ ಅಧ್ಯಕ್ಷತೆಯ ಆಯ್ಕೆ ಸಮಿತಿಗೆ ಮಂಡಿಸಲಾಗುತ್ತಿದೆ. ಸ್ವೀಕೃತಗೊಂಡ ಅರ್ಜಿಗಳ ಪೈಕಿ ಅರ್ಹ ಫಲಾನುಭವಿಗಳನ್ನು ಗುರಿಗೆ ಅನುಗುಣವಾಗಿ ಆಯ್ಕೆ ಸಮಿತಿಯಿಂದ ಆಯ್ಕೆ ಮಾಡಲಾಗುತ್ತಿದ್ದು, ಪ್ರಕ್ರಿಯೆ ಪಾರದರ್ಶಕವಾಗಿರುತ್ತದೆ. | -- |
| 3 | Five Corporations are implementing the same scheme. It is recommended that all can jointly work together for electrification of bore wells and may try to get a preferential treatment. The co-ordination may result in reducing cost and increased efficiency. | ಗಂಗಾ ಕಲ್ಯಾಣ ಯೋಜನೆ ಅನುಷ್ಠಾನಗೊಳಿಸುತ್ತಿರುವ ಎಲ್ಲಾ 5 ನಿಗಮಗಳಿಂದ ಕೊರೆದ ಕೊಳವೆ ಬಾವಿಗಳಿಗೆ ಆದ್ಯತೆ ನೀಡಿ ವಿದ್ಯುತ್ ಸಂಪರ್ಕವನ್ನು ವಿದ್ಯುತ್ ಸರಬರಾಜು ಕಂಪನಿಗಳಿಂದ ನೀಡಲಾಗುತ್ತಿದೆ. ಜಿಲ್ಲಾ ಮಟ್ಟದಲ್ಲಿ ನಡೆಯುವ ಸಭೆಗಳಲ್ಲಿ ಎಲ್ಲಾ ನಿಗಮಗಳ ಅಧಿಕಾರಿಗಳು ಭಾಗವಹಿಸಿ ವಿದ್ಯುತ್ ಸರಬರಾಜು ಕಂಪನಿಗಳ ಅಧಿಕಾರಿಗಳೊಂದಿಗೆ ಸಮನ್ವಯ ಹೊಂದಿ ವಿದ್ಯುದ್ದೀಕರಣ ಪ್ರಕ್ರಿಯೆಯನ್ನು ತ್ವರಿತಗೊಳಿಸುವ ನಿಟ್ಟಿನಲ್ಲಿ ಕ್ರಮವಹಿಸಲಾಗಿದೆ. | -- |

| | | | |
|---|---|---|---|
| 4 | Orientation programmes to be organized for the farmers to train them in modern cultivation practices. | ಗಂಗಾ ಕಲ್ಯಾಣ ಯೋಜನೆಯಡಿ ಸೌಲಭ್ಯ ಪಡೆದ ಫಲಾನುಭವಿಗಳಿಗೆ ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ರೇಷ್ಮೆ ಹಾಗೂ ಇತರೆ ಇಲಾಖೆಗಳಿಂದ ದೊರೆಯುವ ಸೌಲಭ್ಯದ ಬಗ್ಗೆ ಮತ್ತು ಕೃಷಿ ಚಟುವಟಿಕೆ ಜೊತೆಗೆ ಹೆಚ್ಚು ಆದಾಯ ತರುವ ಪೂರಕ ಚಟುವಟಿಕೆಗಳನ್ನು ಕೈಗೊಳ್ಳಲು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸದರಿ ಇಲಾಖೆಗಳ ಅಧಿಕಾರಿಗಳು ಹಾಗೂ ಸಂಪನ್ಮೂಲ ವ್ಯಕ್ತಿಗಳಿಂದ ಮಾಹಿತಿ ಒದಗಿಸಲು ಜಿಲ್ಲಾ ಮಟ್ಟದಲ್ಲಿ ತರಬೇತಿ ಕಾರ್ಯಕ್ರಮ (ಮಂಥನ)ವನ್ನು ಏರ್ಪಡಿಸಲಾಗುತ್ತಿದೆ. | -- |
| 5 | In the long run solar and other sources of energy to be introduced for energization of the pump sets. | ಹಾಲಿ ಸೋಲಾರ್ ಪಂಪ್‌ಗಳು ಸೀಮಿತ ಆಳಕ್ಕೆ ಮಾತ್ರ ಕಾರ್ಯನಿರ್ವಹಿಸುವ ಸಾಮರ್ಥ್ಯ ಹೊಂದಿರುತ್ತದೆ. ಪ್ರಸ್ತುತ ಅಂತರ್ಜಲ ಕುಸಿತದಿಂದಾಗಿ ಹೆಚ್ಚಿನ ಆಳದವರೆಗೆ ಕೊಳವೆ ಬಾವಿಗಳನ್ನು ಕೊರೆಯಿಸಲಾಗುತ್ತಿದೆ.<br>ಮುಂದಿನ ದಿನಗಳಲ್ಲಿ ಹೆಚ್ಚಿನ ಆಳದ ಕೊಳವೆ ಬಾವಿಗಳಿಗೆ ಅಗತ್ಯವಿರುವ ಸಾಮರ್ಥ್ಯದ ಸೋಲಾರ್ ಪಂಪುಗಳನ್ನು ಉತ್ಪಾದಿಸಿದಲ್ಲಿ ಪಂಪುಗಳನ್ನು ಅಳವಡಿಸಿಕೊಳ್ಳುವ ಬಗ್ಗೆ ಕ್ರಮವಹಿಸಲಾಗುವುದು. | -- |
| 6 | The cost of a single unit for establishment should also be revised periodically, considering water table levels as well as inflation rates. | 15ನೇ ವಿಧಾನ ಸಭೆಯ ಕರ್ನಾಟಕ ವಿಧಾನ ಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಯ ಮಧ್ಯಂತರ ವರದಿಯಲ್ಲಿ ರಾಜ್ಯದಲ್ಲಿ ಕೆಲವು ಬರಪಿಡಿತ ಜಿಲ್ಲೆಗಳಲ್ಲಿ ಅಂತರ್ಜಲ ಮಟ್ಟವು ಕುಸಿದಿದ್ದು, ಅತಿ ಹೆಚ್ಚಿನ ಆಳದವರೆಗೆ ಕೊಳವೆ ಬಾವಿಗಳನ್ನು ಕೊರೆಯಿಸಬೇಕಾಗಿರುವುದರಿಂದ ಅಂತರ್ಜಲ ಮಟ್ಟದ ಆಳದ ಆದಾರಧ ಮೇಲೆ ಘಟಕ ವೆಚ್ಚವನ್ನು ಹೆಚ್ಚಿಸಲು ಶಿಫಾರಸ್ಸು ಮಾಡಿರುತ್ತದೆ.<br>ಈ ಹಿನ್ನೆಲೆಯಲ್ಲಿ 24 ಜಿಲ್ಲೆಗಳಿಗೆ ಅನ್ವಯವಾಗುವಂತೆ ಸಹಾಯಧನ ಮೊತ್ತವನ್ನು ರೂ.3.00ಲಕ್ಷಗಳಿಗೆ ಹೆಚ್ಚಿಸಿ ವಿದ್ಯುದ್ದೀಕರಣ ವೆಚ್ಚ ರೂ.50,000/- ಹಾಗೂ ಸಾಲದ ಮೊತ್ತ ರೂ.50,000/- ಒಳಗೊಂಡಂತೆ ಘಟಕವೆಚ್ಚವನ್ನು ರೂ.4.00ಲಕ್ಷಗಳಿಗೆ ನಿಗದಿ ಪಡಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಕೋರಲಾಗಿರುತ್ತದೆ.<br>ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ ಹಾಗೂ ತುಮಕೂರು ಜಿಲ್ಲೆ ಈ ಒಟ್ಟು 06 ಜಿಲ್ಲೆಗಳಿಗೆ ಘಟಕವೆಚ್ಚವನ್ನು ರೂ.5.00ಲಕ್ಷಗಳಿಗೆ ಹೆಚ್ಚಿಸಲು ಪ್ರಸ್ತಾವನೆಯಲ್ಲಿ ಕೋರಲಾಗಿರುತ್ತದೆ. | -- |

| | | | |
|---|---|---|---|
| 7. | On lift irrigation front, it was found that the amount provided per acre is not enough. There is a need to enhance the amount to cover the cost adequately. | ಏತನೀರಾವರಿ ಘಟಕದಲ್ಲಿ ಒಳಪಡುವ ಜಮೀನುಗಳಿಗೆ ಪ್ರತಿ ಎಕರೆಗೆ ರೂ.40,000/-ಗಳಂತೆ ಲೆಕ್ಕೀಕರಿಸಿ ಒಟ್ಟು ಮೊತ್ತ ನಿರ್ಧರಿಸಿ ಯೋಜನೆ ಅನುಷ್ಠಾಗೊಳಿಸಲಾಗುತ್ತಿದೆ. ಈ ಮೊತ್ತ ಕಡಿಮೆ ಇದ್ದು ಇದನ್ನು ಹೆಚ್ಚಿಸುವ ಬಗ್ಗೆ ಕೋರಿಕೆಗಳು ಇರುವ ಹಿನ್ನೆಲೆಯಲ್ಲಿ ತಾಂತ್ರಿಕ ಅಂಶಗಳ ಆದಾರದ ಮೇಲೆ ಮೊತ್ತ ಪರಿಷ್ಕರಿಸಿ ಹೆಚ್ಚಳ ಮಾಡುವ ಬಗ್ಗೆ ಕ್ರಮವಹಿಸಲಾಗುವುದು. | -- |
| 8 | If bore well fails within six months there should be a cost sharing mechanism with the beneficiaries to ensure rejuvenation of these bore wells. | ಕೊರೆದ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿ ಆರ್.ಆರ್.ಸಂಖ್ಯೆ ನೀಡಿದ ಒಂದು ವರ್ಷದ ಅವದಿಯವರೆಗೆ ಕೊಳವೆ ಬಾವಿಯಲ್ಲಿ ನಿಗದಿತ ಪ್ರಮಾಣದ ನೀರು ಇರುವ ಬಗ್ಗೆ ಖಾತ್ರಿ ನೀಡುವುದು. ಕೊಳವೆ ಬಾವಿ ಕೊರೆದ ಗುತ್ತಿಗೆದಾರರ ಜವಾಬ್ದಾರಿಯಾಗಿರುತ್ತದೆ.<br>ಒಂದು ವೇಳೆ ಕೊಳವೆ ಬಾವಿಯಲ್ಲಿ ಒಂದು ವರ್ಷದ ಅವದಿಯಲ್ಲಿ ನೀರಿನ ಇಳುವರಿ ಇಲ್ಲದೆ ವಿಫಲಗೊಂಡಲ್ಲಿ ಬೇರೆ ಕೊಳವೆ ಬಾವಿ ಕೊರೆಯಬೇಕಾದ ಜವಾಬ್ದಾರಿ ಗುತ್ತಿಗೆದಾರನದಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಈ ಅಂಶದ ಬಗ್ಗೆ ಕ್ರಮದ ಅಗತ್ಯತೆ ಕಂಡುಬರುವುದಿಲ್ಲ. | -- |

ವ್ಯವಸ್ಥಾಪಕ ನಿರ್ದೇಶಕರು.